# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂಃ 574/2023

| | | | |
|---|---|---|---|
| ಸಾಕ್ಷಿಯ ಹೆಸರು | ಃ ಡಾಃ ಕುಸುಮಾ | ಸಿ.ಡಬ್ಲ್ಯೂ | ಃ 17 |
| ತಂದೆ ಹೆಸರು | ಃ ದಾಮೋದಾರ್ ಕಪಾಡಿ | ಪಿ.ಡಬ್ಲ್ಯೂ | ಃ 07 |
| ವಯಸ್ಸು | ಃ 41 **ವರ್ಷ** | ಪ್ರಮಾಣೀಕರಿಸಿದ ದಿಃ | 14.05.2026 |
| ವೃತ್ತಿ | ಃ ಕಿವಿ ಮತ್ತು ಮೂಗು ತಜ್ಞರು | | |
| ವಾಸ | ಃ ಹಾಸನ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ನಾನು 28.07.2020 ರಿಂದ ಇಲ್ಲಿಯವರೆಗೆ ಹೊಳೆನರಸೀಪುರ ಸರ್ಕಾರಿ ಆಸ್ಪತ್ರೆಯಲ್ಲಿ ಕಿವಿ ಮತ್ತು ಮೂಗು ತಜ್ಞರಾಗಿ ಕರ್ತವ್ಯ ನಿರ್ವಹಿಸುರುತ್ತೇನೆ.

ದಿನಾಂಕಃ 04.10.2022 ರಂದು ಸಂಜೆ 5.00 ರ ಸಮಯದಲ್ಲಿ ಮಂಗಳಮ್ಮ ಕೊಂ ಉಮೇಶರವರನ್ನು ಬೈಕಿನಿಂದ ಬಿದ್ದ ಹಿನ್ನಲೆಯಲ್ಲಿ ಆರೋಪಿ ಮಂಗಳಮ್ಮ ನವರವನ್ನು ಆಸ್ಪತ್ರೆಗೆ ಚಿಕಿತ್ಸೆಗೆ ಕರೆತಂದಿದ್ದು, ಅವರನ್ನು ಪರೀಕ್ಷಿಸಲಾಗಿ ಅವರ ಸ್ವಲ್ಪ ಮಂಪರು ಸ್ಥಿತಿಯಲ್ಲಿದ್ದು ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ತಲೆಯ ಬಲಭಾಗದಲ್ಲಿ 2* 1 ಸೆಂ. ಮೀ ನ ಹರಿದ ಗಾಯ.

ಸಾಕ್ಷಿ ಯ ಅಪಘಾತ ವಹಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಪಿ 13 ಮತ್ತು ಸಹಿಯನ್ನು ನಿಪಿ- 13(ಎ) ಎಂದು ಗುರುತಿಸಲಾಯಿತು. ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಸೀಟಿ ಸ್ಕ್ಯಾನ್ ಗೆ ಮತ್ತು ಶಸ್ತ್ರ ಚಿಕಿತ್ಸಕರಿಗೆ ಕಳುಹಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ ಪಿ ವಕೀಲರಿಂದಃ

ಅಪಘಾತಕ್ಕೆ ಒಳಗಾದ ವ್ಯಕ್ತಿ ನನಗೆ ಯಾವುದೇ ಮಾಹಿತಿ ನೀಡಿಲ್ಲ. ನಿ ಪಿ 13 ರಲ್ಲಿ ಸೀಟಿ ಸ್ಕ್ಯಾನ್ ಶಸ್ತ್ರ ಚಿಕಿತ್ಸಕರಿಗೆ ಕಳುಹಿಸಿರುವುದು ನಮೂದು ಇದೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಆಯಾ ತಪ್ಪಿ ಕಲ್ಲಿನ ಮೇಲೆ ಬಿದ್ದಾಗ ನಿ ಪಿ 13 ರರೀತಿಯ ಗಾಯಗಳು ಉಂಟಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

ಪಾಟೀ ಸವಾಲು ಮುಕ್ತಾಯ:

ಮರು ವಿಚಾರಣೆ ಇಲ್ಲ:

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,

ಹೊಳೆನರಸೀಪುರ